# 01 Karnataka Power Transmission Corporation Limited
## Departmental Examination – January 2022
## SAS PART-I PAPER -1
### (English/Kannada-Precise Writing & Drafting)
### (Books, Guide, Notes etc. Are Not Allowed)

**Date : 03.01.2022** **Maximum Marks : 100** **Time : 9:30 am TO 12:30 pm**

---

## PART-A

**1. Write a precise of the following Passage in about one-third of its length in your own words with a suitable title. 10**

Variation in the purchasing power of money may be a serious matter. When prices fall constantly, the business world may be discouraged and thrown in to a state of depression. On the other hand, when prices rise constantly business may become over excited; and certainly the real incomes of the wage-earning classes are automatically reduced so that discontent is engendered; and an era of disturbance in the distribution of wealth is ushered in.

Indeed, there is no economic phenomenon which remains unaffected by an alteration in the purchasing –power of money. The rate of interest will probably be affected because an anticipated fall in its value has the reverse effect. And the relative prices of different classes of securities will undoubtedly shift in a disturbing way. When prices ascent, for instance, the value of shares in property to which they relate, expressed in money, will ascend; but no ascent will take place in the value of securities standing for example, in the value of consols. Nevertheless, we must not conclude off-hand that for every reason steady prices are theoretically best for the community, One thought which should give pause may be expressed. When prices are steady a proper share of the benefits of progress does not automatically accrue to the wages become needful. Possibly the ideal would be a fall in prices exactly corresponding in degree with productive progress; but all economists would not endorse this pronouncement, owing to the effect which they think falling prices have upon the directors of industry; and in any event it would be impossible to bring about exactly, or even approximately, such a variation in the purchasing power of money. From a practical point of view, when all advantages and disadvantages are weighed, it is probable that steady prices would be best if they could be secured. A suggestion has been made that countries, acting in concert, should regulate the quantity of money with reference to index numbers of prices so that prices are kept approximately stationary; but, though theoretically such a scheme should be carried out, he would; be rash prophet who should venture to foretell that it is really feasible. However, we may conclude that reliable index-numbers of general prices ought to kept and made public (as they are), and carefully watched by the business world (as they are not ordinarily) with a view to orders relating to the future and adjustment of salaries and wages.

**2. Read the following passage and answer the questions given below in your own words** **10**

From Indian block prints to iridescent fabrics and silk Chiffon, India has an array of cloth materials to vouch for. There is a great history to these textiles that we may be wearing regularly or even occasionally and yet do not know their origin.

Even though silk originates from China, it has its deep roots in India too, popularly known as resham in the north of our country and pattu in the south. Silk in India is luxurious fabric. Most of them are large and heavy having zari work on it especially if they are Kanchipuram sarees. Apart from North and South India, Assam is also another state which is known for its silk.

The origin of iridescent fabric lies in the lands of Tamil Nadu and Bihar. We can explore the different iridescent colours and weaves very minutely and each piece of this textile gives a touch of beauty and texture. Woven fabrics will have certain variations in their colours wherein the clothes may appear to be two toned. Thus since the word iridescent itself means shimmering, this particular fabric looks the best bright gold semi-sheer colours because the cloth itself is shimmery.

Shantung and silk dupion fabrics are absolutely apt for dresses and home decoration. Textile engineers recommend hand washing as a mode of cleaning silk, even if the label of cloth saying machine wash. Never dry shantung and dupion silk directly under the sun or else it will damage the fibre and the colour. In case there is a stain in the cloth straightaway take it to the dry cleaning experts. The shantung and dupion silks are as delicate as any other silk.

Whether it be cotton or silk a variety of fabrics are woven almost in every nook and corner of India. Chanderi is also another fabric which is gaining a huge momentum these days apart from the above mentioned ones and is found to be used in fine cotton sarees. Gadwal and Wanaparti produce thick cotton sarees. Another unique fabric is Karalkudi which is basically unbleached cotton fabric. We can find silk fabric pattern called Amru, which is enclosed by a border and heavy pallu with flowers or mangoes all over it. There is a plethora of Indian textiles so why go for the western ones?

**Qestions:**

a) In which of the states of India the iridescent fabric originates?
b) List out the types of cotton fabric mentioned in the above paragraph.
c) What is the speciality of Amru silk saree?
d) What is the reason for the author to say ‘So why should we go to the western ones?’
e) How to take care of Shantung and dupion silk fabrics?

**3. Change the following sentences from Active voice to Passive voice:-** **5**

a) The cleaning crew vacuums and dusts the office every night.
b) Susan will bake two dozen cupcakes for the bake sale.
c) Thousands of tourists visit the Grand Canyon every year.
d) Larry generously donated money to the homeless.
e) The teacher always answers the students' questions.

**4. Write the synonyms of the following words:** **5**

a) Adequate, b) candid c) illicit d) Eradicate

e) Reimburse

**5. Insert the correct tense of verb in the following** **5**

a) Water ______________ at zero degree Centigrade.(froze, freeze, freezes)

b) We ________________cricket match last night. (watched, watches, watching)

c) Am I ________________you? (bothers, bothering, bother)

d) Suresh ________________football next Sunday. (play, will be playing, played)

e) Mother _______to market to fetch flowers yesterday. ( has been, have been, had been)

**6. Write the Antonyms and synonyms for the following sentences.** **5**

a) He rose ____ with a soaring heart, but came ________ with his head in his hands.

b) The bird flew ____ through the open door, but had to escape _____the window.

c) I'm leaving in three minutes, either _____ or ________ you.

d) He knew he could face the _______ day of his life if he was with his _______ friend.

e) While his story was totally ___________ the conclusion he drew from it was highly ____________.

**7. Use the following phrases in your own sentences.** **5**

a) Come up with

b) Regardless of

c) Work out

d) Show up

e) Looking forward

**8. Correct the following sentences:** **5**

a) The stable has been broken and horses stolen.

b) Let you and I go together

c) She is one of the director of the company.

d) Nobody will be allowed to express their opinion

e) One is proud of his own success

## PART B

**9.** Draft a Circular from General Manager (Personnel), KPTCL with instructions to all deputed Officers of KPTCL/ESCOMS/PCKL to compulsorily carryout the Departmental Examination work assigned to them. **10**

**10.** Draft a report from the Financial Adviser (IA) to the M.D., ESCOM, about the discrepancies observed by the Account Officer (IA) of the division during audit of divisional stores. **10**

**11.** Draft a letter from General Manager (A&HRD), Corporate Office HESCOM to the Zonal/Circle/Divisional Officers of HESCOM to take adequate steps to settle the pensionary benefits of Retiring Officers and Employees under their jurisdiction. **10**

**12.** Draft a demand notice from Asst. Ex. Engr. (Ele.), O&M sub-division, Rajarajeshwarinagar, BESCOM, Bengaluru for collection of Additional Security Deposit from a LT-5 consumer. **10**

**13.** Draft a letter from FA (A&R), KPTCL, Bengaluru to all the CEEs, CAs, SEEs, DCAs, EEs,AOs of KPTCL for the procedure to be followed while sending fund requisition for transfer of funds. **10**

# ಕನ್ನಡ

# ಭಾಗ–ಎ

**1. ಈ ಕೆಳಕಂಡ ಗದ್ಯಭಾಗವನ್ನು 3ನೇ ಒಂದರಷ್ಟಕ್ಕೆ ಸಂಕ್ಷಿಪ್ತಗೊಳಿಸಿ. ಸೂಕ್ತ ಶಿರೋನಾಮೆ ಬರೆಯಿರಿ** **10**

ಈ ಮೊದಲು ಟಿ.ವಿ ಕಾರ್ಯಕ್ರಮಗಳು ಕೇಬಲ್ ಮೂಲಕ ಪ್ರಸಾರವಾಗುತ್ತಿದ್ದು ಈಗ ಪರಿಸ್ಥಿತಿ ಬದಲಾಗಿದ್ದು ಡಿಶ್ ಆಂಟೆನಾಗಳ ಪರಿಚಯವಾದಾಗ. ದೊಡ್ಡ ಬಾಣಲೆಯಂತಹ ಈ ಸಾಧನವನ್ನು ಅಂಗಳದಲ್ಲಿ ಅಳವಡಿಸಿ, ನಿರ್ದಿಷ್ಟ ದಿಕ್ಕಿಗೆ ತಿರುಗಿಸಿ, ಟಿ.ವಿಗೆ ಸಂಪರ್ಕಿಸಿದ ಕೂಡಲೇ ಬೆಂಗಳೂರಿಗೂ ಸಣ್ಣ ಸಣ್ಣ ಊರುಗಳಿಗೂ ಇದ್ದ ಒಂದು ವ್ಯತ್ಯಾಸ ಥಟ್ಟನೆ ಮಾಯವಾಗಿ ಹೋಯಿತು. ಬೇರೆಬೇರೆ ಚಾನಲ್ಲುಗಳನ್ನು ವಿಕ್ಷಿಸುವ ಮೂಲಕ ಎಲ್ಲರಿಗೂ ತಮ್ಮ ಟಿ.ವಿ ಜ್ಞಾನವನ್ನು ಹೆಚ್ಚಿಸಿಕೊಳ್ಳುವ, ಸ್ಕ್ರೀನ್ ಟೈಮ್ ಜಾಸ್ತಿಯಾಯಿತೆಂದು ಬೈಸಿಕೊಳ್ಳುವ ಅವಕಾಶ ದೊರಕಿತು.

ಈಗ ಹಳ್ಳಿ–ನಗರಗಳ ವ್ಯತ್ಯಾಸವೇ ಇಲ್ಲದಂತೆ ಎಲ್ಲರೂ ಡಿಟಿಹೆಚ್ ಸೌಲಭ್ಯವನ್ನು ಬಳಸುತ್ತಿರುವ ಸಂದರ್ಭದಲ್ಲಿ, ಇದೊಂದು ಹಳೆಯ ಕತೆಯಂತೆ ಮಾತ್ರ ಕೇಳಿಸಬಹುದು. ಕೆಲವು ಟಿ.ವಿ ಚಾನಲ್ಲುಗಳನ್ನು ನೋಡುವ ಅವಕಾಶವಿಲ್ಲದಿದ್ದರೆ ಒಳ್ಳೆಯದೇ ಆಯಿತು ಎಂದೂ ಕೆಲವರಿಗೆ ಅನ್ನಿಸಬಹುದು. ಆದರೆ ಮೇಲಿನ ಜಾಗದಲ್ಲಿ ಅಂತರ್ಜಾಲ ಸಂಪರ್ಕವನ್ನು ಕಲ್ಪಿಸಿಕೊಂಡಲ್ಲಿ ನಮ್ಮೆಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಅಂತರ್ಜಾಲ ಸಂಪರ್ಕವು ಉಪಯುಕ್ತವೆನಿಸಿದೆ. ಅಂತರ್ಜಾಲ ಸಂಪರ್ಕವನ್ನು ನಮ್ಮ ಮೂಲಭೂತ ಹಕ್ಕೆಂದು ಪರಿಗಣಿಸಬೇಕು ಎನ್ನುವ ನಿಟ್ಟಿನಲ್ಲಿಯೂ ಸಾಕಷ್ಟು ಚರ್ಚೆನಡೆದಿದೆ. ವಿಶ್ವಸಂಸ್ಥೆಯಲ್ಲಿ, ಭಾರತದಲ್ಲಿನ ನ್ಯಾಯಲಯಗಳಲ್ಲಿಯೂ ಈ ವಿಷಯ ಪ್ರಸ್ತಾಪವಾಗಿದೆ.

ಆದರೆ ವಿಶ್ವದೆಲ್ಲೆಡೆಯ ಹಲವಾರು ಪ್ರದೇಶಗಳು ಇಂದಿಗೂ ಸಾಂಪ್ರದಾಯಿಕ ದೂರಸಂಪರ್ಕ ಜಾಲಗಳ ವ್ಯಾಪ್ತಿಯಿಂದ ಹೊರಗೇ ಉಳಿದಿದ್ದು ಅಲ್ಲಿನ ಜನರು ಅಂತರ್ಜಾಲದ ಅನುಕೂಲತೆಗಳಿಂದ ವಂಚಿತರಾಗಿದ್ದಾರೆ. ಆನ್‌ಲೈನ್ ಶಿಕ್ಷಣ ಪಡೆದುಕೊಳ್ಳುವಲ್ಲಿ ನಮ್ಮ ಗ್ರಾಮೀಣ ವಿದ್ಯಾರ್ಥಿಗಳು ಎದುರಿಸಿದ ಸವಾಲುಗಳು ಈ ಸಮಸ್ಯೆಯ ಸ್ವರೂಪವನ್ನು ಬಹಳ ಸ್ಪಷ್ಟವಾಗಿ ನಮ್ಮ ಮುಂದೆ ತೆರೆದಿಟ್ಟಿವೆ. ಬಾಣಲೆಯಂತಹ ಡಿಶ್ ಆಂಟೆನಾ ತಂದಿಟ್ಟ ನಾವು ಕೇಬಲ್ ಗೊಡವೆಯೇ ಇಲ್ಲದೆ ಹೊಸ ಚಾನ್ನಲ್ಲುಗಳನ್ನು ನೋಡಿದ ಹಾಗೆ, ದೂರಸಂಪರ್ಕ ಜಾಲಗಳಿಂದ ದೂರವಿದ್ದವರೂ ಅಂತರ್ಜಾಲ ಸಂಪರ್ಕ ಪಡೆಯುವುದಕ್ಕೆ ಯಾವುದಾದರೂ ಮಾರ್ಗ ಇದೆಯೇ? 'ಖಂಡಿತಾ ಇದೆ' ಎಂದು ಹೇಳುತ್ತಿರುವುದು ಉಪಗ್ರಹ ಅಂತರ್ಜಾಲದ (ಸ್ಯಾಟಿಲೈಟ್ ಇಂಟರ್‌ನೆಟ್) ಪರಿಕಲ್ಪನೆ. ಮೊಬೈಲ್ ಟವರ್

ಅಥವಾ ಯಾವುದೇ ರೀತಿಯ ತಂತಿಯನ್ನು ಅವಲಂಬಿಸುವ ಬದಲು, ನೇರವಾಗಿ ಉಪಗ್ರಹಗಳ ಮೂಲಕವೇ ಅಂತರ್ಜಾಲ ಸಂಪರ್ಕವನ್ನು ಕಲ್ಪಿಸಿಕೊಡುವುದು ಈ ಪರಿಕಲ್ಪನೆಯ ಉದ್ದೇಶ. ಡಿಟಿಹೆಚ್ ವ್ಯವಸ್ಥೆಯಲ್ಲಿ ಬಳಕೆಯಾಗುವಂತಹವೇ ಡಿಶ್ ಆಂಟೆನಾಗಳು ಇಲ್ಲಿ ಅಂತರ್ಜಾಲ ಸಂಪರ್ಕವನ್ನು ಮನೆಮನೆಗಳಿಗೆ ತಲುಪಿಸುತ್ತವೆ. ಡಿಟಿಹೆಚ್ ವ್ಯವಸ್ಥೆಯಲ್ಲಿ ಏಕ ಮುಖವಾಗಿರುವ (ಉಪಗ್ರಹದಿಂದ ಮನೆಗೆ) ಸಂವಹನ ಇಲ್ಲಿ ಎರಡೂ ಮಾರ್ಗಗಳಲ್ಲಿ (ಮನೆಯಿಂದ ಉಪಗ್ರಹಕ್ಕೆ ಹಾಗೂ ಉಪಗ್ರಹದಿಂದ ಮನೆಗೆ) ನಡೆಯುತ್ತದೆ ಎನ್ನುವುದು ವಿಶೇಷ. ಈ ಬಗೆಯ ಸಂಪರ್ಕಗಳು ಸಾಂಪ್ರದಾಯಿಕ ದೂರಸಂಪರ್ಕ ಜಾಲಗಳನ್ನು ಬಳಸದೆ ಇರುವುದರಿಂದ ಎಷ್ಟೇ ದುರ್ಗಮವಾದ ಪ್ರದೇಶದಲ್ಲೂ ಇವುಗಳನ್ನು ಬಳಸುವುದು ಸಾಧ್ಯವಾಗುತ್ತದೆ. ಉಪಗ್ರಹ ಅಂತರ್ಜಾಲ ಸಂಪರ್ಕಗಳು ಎಲ್ಲರ ಕೈಗೂ ಎಟುಕುವಂತಾದರೆ ನಮ್ಮ ಹಳ್ಳಿಗಾಡಿನ ವಿದ್ಯಾರ್ಥಿಗಳೂ ಉಳಿದವರೆಲ್ಲರ ಜೊತೆ ಸಮಾನವಾಗಿ ಸ್ಪರ್ಧಿಸುವುದು ಸಾಧ್ಯವಾಗುತ್ತದೆ. ಅದು ಹಾಗೆಯೇ ಆಗಲಿ ಎಂದು ಆಶಿಸೋಣ.

**2. ಈ ಲೇಖನವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:– 10**

ಆ ಕಾಲದಲ್ಲಿ ನಾನು ಶಿಕ್ಷಕರಿಗಾಗಲಿ ಸ್ನೇಹಿತರಿಗಾಗಲಿ ಎಂದೂ ಸುಳ್ಳು ಹೇಳಿದ ನೆನಪಿಲ್ಲ. ನಾನು ಬಹಳ ನಾಚಿಕೆಯ ಸ್ವಭಾವದವನಾಗಿದ್ದೆನು. ಯಾರ ಜೊತೆಗೂ ಸೇರುತ್ತಿರಲಿಲ್ಲ. ನನ್ನ ಪುಸ್ತಕ, ಪಾಠಗಳು, ಇವೇ ನನ್ನ ಮಿತ್ರರು, ಗಂಟೆ ಹೊಡೆಯುವ ಹೊತ್ತಿಗೆ ಶಾಲೆಗೆ ಹೋಗುವುದು, ಶಾಲೆ ಮುಗಿಯುತ್ತಲೇ ಮನೆಗೆ ಓಡುವುದು, ಇದು ನನ್ನ ದಿನನಿತ್ಯದ ಅಭ್ಯಾಸವಾಗಿತ್ತು. ನಾನು ನಿಜವಾಗಿಯೂ ಓಡಿಯೇ ಮನೆ ಸೇರುತ್ತಿದ್ದೆ. ಏಕೆಂದರೆ ನನಗೆ ಯಾರೊಂದಿಗೂ ಮಾತನಾಡುವ ಧೈರ್ಯವಿರಲಿಲ್ಲ. ಯಾರಾದರೂ ನನ್ನನ್ನು ಕುಚೋದ್ಯ ಮಾಡುವರೋ ಎಂಬ ಭಯ ನನಗಿತ್ತು.

ಪ್ರೌಢಶಾಲೆಯ ಮೊದಲನೆಯ ವರ್ಷದ ಪರೀಕ್ಷೆಯ ವೇಳೆಯಲ್ಲಿ ನಡೆದ ಘಟನೆಯೊಂದನ್ನು ಹೇಳಬೇಕು. ಇನ್‌ಸ್ಪೆಕ್ಟರ್ ಮಿ. ಗೈಲ್ಸ್ ಪರಿಶೀಲನೆಗಾಗಿ ಶಾಲೆಗೆ ಬಂದಿದ್ದರು. ಅವರು ಮೊದಲನೆಯ ತರಗತಿಯ ವಿದ್ಯಾರ್ಥಿಗಳಿಗೆ ಐದು ಪದಗಳನ್ನು ಬರೆಯಲು ಕೊಟ್ಟರು. ಅವುಗಳ ಪೈಕಿ ಕೆಟಲ್ (Kettle) ಎಂಬ ಪದವೂ ಒಂದು. ನಾನು ಅದನ್ನು ತಪ್ಪಾಗಿ ಬರೆದೆ. ನಮ್ಮ ಉಪಾಧ್ಯಾಯರು ತಮ್ಮ ಪಾದರಕ್ಷೆಯ ತುದಿಯಿಂದ ನನ್ನನ್ನು ಎಚ್ಚರಿಸಲು ಪ್ರಯತ್ನಿಸಿದರು. ನಾನು ಆ ಸೂಚನೆಯಂತೆ ನಡೆಯಲಿಲ್ಲ. ಮುಂದಿನ ಹುಡುಗನ ಸ್ಲೇಟನ್ನು ನೋಡಿಕೊಂಡು ನನ್ನ ತಪ್ಪನ್ನು ತಿದ್ದಿಕೊಳ್ಳಬೇಕೆಂಬುದು ನಮ್ಮ ಉಪಾಧ್ಯಾಯರ ಉದ್ದೇಶ. ಅದು ನನಗೆ ಒಪ್ಪಿಗೆಯಾಗಲಿಲ್ಲ. ಏಕೆಂದರೆ ನಾವು ಕಾಪಿ ಮಾಡದಂತೆ ನೋಡಿಕೊಳ್ಳುವುದೇ ಉಪಾಧ್ಯಾಯರ ಕೆಲಸವೆಂದು ನಾನು ತಿಳಿದಿದ್ದೆ. ಇದರ ಪರಿಣಾಮವಾಗಿ ನನ್ನನ್ನು ಹೊರತು ಉಳಿದ ಹುಡುಗರೆಲ್ಲ ಐದು ಪದಗಳನ್ನೂ ಸರಿಯಾಗಿ ಬರೆದಿದ್ದರು. ನಾನೊಬ್ಬನೇ ದಡ್ಡ. ಇದಾದ ಮೇಲೆ, ಉಪಾಧ್ಯಾಯರು ನನ್ನ ಮೂರ್ಖತನವನ್ನು ನನಗೆ ತೋರಿಸುವುದಕ್ಕೆ ಪ್ರಯತ್ನಪಟ್ಟರು. ಅದರಿಂದ ಅವರಿಗೆ ವೃಥಾ ಶ್ರಮವಾಯಿತೇ ಹೊರತು ಕಾಪಿ ಮಾಡುವ ಕಲೆ ನನಗೆ ಕೊನೆಗೂ ಬರಲೇ ಇಲ್ಲ.

ಇಷ್ಟಾದರೂ ಉಪಾಧ್ಯಾಯರಲ್ಲಿ ನನಗಿದ್ದ ಗೌರವ ಕಿಂಚಿತ್ತೂ ಕಡಿಮೆಯಾಗಲಿಲ್ಲ. ಏಕೆಂದರೆ ಹಿರಿಯರ ದೋಷಗಳನ್ನು ಎಣಿಸದಿರುವುದು ನನ್ನ ಸ್ವಾಭಾವಿಕ ಗುಣವಾಗಿತ್ತು. ಅನಂತರ ಆ ಉಪಾಧ್ಯಾಯರ ಇತರ ದೋಷಗಳೂ ನನಗೆ ತಿಳಿದು ಬಂದವು. ಆದರೆ ಅವರಲ್ಲಿ ನನ್ನ ಆದರ ಭಾವ ಕಡಿಮೆಯಾಗಲಿಲ್ಲ. ಹಿರಿಯರ ಅಣತಿಯನ್ನು ಪಾಲಿಸುವುದು ನಮ್ಮ ಕರ್ತವ್ಯ. ಅವರ ಕಾರ್ಯವನ್ನು ಪರೀಕ್ಷಿಸುವುದಲ್ಲ ಎಂಬುದನ್ನು ನಾನು ಅರಿತಿದ್ದೆ.

ಇದೇ ಸಮಯದಲ್ಲಿ ನಡೆದ ಮತ್ತೆರಡು ಸಂಗತಿಗಳು ಯಾವಾಗಲೂ ನನ್ನ ನೆನಪಿನಲ್ಲಿ ಉಳಿದಿವೆ. ಪಠ್ಯಪುಸ್ತಕಗಳ ಹೊರತು ಬೇರೆ ಏನನ್ನೂ ಓದುವುದು ಸಾಧಾರಣವಾಗಿ ನನಗೆ ಸೇರುತ್ತಿರಲಿಲ್ಲ. ನಿತ್ಯದ ಪಾಠಗಳನ್ನಂತೂ ಓದಲೇಬೇಕಾಗಿತ್ತು. ಉಪಾಧ್ಯಾಯರು ನನ್ನನ್ನು ಗದರಿಸುವುದು ನನಗೆ ಇಷ್ಟವಿರಲಿಲ್ಲ. ಹೀಗೆ ಪಾಠಗಳನ್ನೇ ಸರಿಯಾಗಿ ಓದುತ್ತಿರಲಿಲ್ಲವೆಂದ ಮೇಲೆ, ಇನ್ನು ಇತರ ಹೆಚ್ಚಿನ ವ್ಯಾಸಂಗದ ಪ್ರಶ್ನೆ ಎಲ್ಲಿ ಬಂತು. ಆದರೆ ಹೇಗೋ ನಮ್ಮ ತಂದೆ ಕೊಂಡುಕೊಂಡು ಬಂದಿದ್ದ ಒಂದು ಪುಸ್ತಕ ನನ್ನ ಕಣ್ಣಿಗೆ ಬಿತ್ತು. ಅದರ ಹೆಸರು 'ಶ್ರವಣನ ಪಿತೃಭಕ್ತಿ ನಾಟಕ'. ಅದನ್ನು ನಾನು ಅತ್ಯಂತ ಆಸಕ್ತಿಯಿಂದ ಓದಿದೆ. ಅದೇ ಸಮಯದಲ್ಲಿ ಸಂಚಾರೀ ಬೊಂಬೆ ಪ್ರದರ್ಶಕರು ನಮ್ಮ ಊರಿಗೆ ಬಂದರು. ಅವರು ನನಗೆ ತೋರಿಸಿದ ಒಂದು ಚಿತ್ರ, ಶ್ರವಣ ತನ್ನ ಕುರುಡು ತಂದೆ ತಾಯಿಯರನ್ನು ಅಡ್ಡೆಯಲ್ಲಿ ಕೂರಿಸಿಕೊಂಡು, ಅದನ್ನು ಹೆಗಲಿನ ಮೇಲೆ ಹೊತ್ತುಕೊಂಡು ಯಾತ್ರೆಗಾಗಿ ಹೋಗುತ್ತಿದ್ದ ಚಿತ್ರ, ಆ ಪುಸ್ತಕ, ಆ ದೃಶ್ಯ, ಎರಡೂ ನನ್ನ ಅಂತರಂಗದಲ್ಲಿ ಶಾಶ್ವತವಾಗಿ ಅಂಕಿತವಾದವು. ಇಗೋ ಇಲ್ಲಿ ನಿನಗೊಂದು ಆದರ್ಶವಿದೆ. ಅದನ್ನು ಅನುಕರಿಸು ಎಂದು ನನಗೆ ನಾನೇ ಹೇಳಿಕೊಂಡೆ. ಶ್ರವಣ ಮರಣ ಹೊಂದಲು, ಅವನ ಮಾತಾಪಿತೃಗಳ ಆರ್ತವಿಲಾಪ ನನ್ನ ಕಿವಿಗೆ ಈಗಲೂ ಕೇಳುವಂತಿದೆ. ಆ ರಾಗ, ನನ್ನ ಹೃದಯವನ್ನು ಕರಗಿಸಿತು. ನಮ್ಮ ತಂದೆ ಕೊಂಡುಕೊಟ್ಟಿದ್ದ ರಾಗಮಾಲಿಕೆಯಲ್ಲಿ ಅದನ್ನು ಬಾರಿಸಲು ಕಲಿತೆ.

**ಪ್ರಶ್ನೆಗಳು:**

ಅ. ಲೇಖಕರು ಶಾಲೆ ಮುಗಿಯುತ್ತಲೇ ಮನೆಗೆ ಓಡಿ ಹೋಗಲು ಕಾರಣವೇನು?

ಆ. ಪ್ರೌಢಶಾಲೆಯ ಮೊದಲನೆಯ ವರ್ಷದ ಪರೀಕ್ಷೆಯ ವೇಳೆಯಲ್ಲಿ ನಡೆದ ಘಟನೆಯೇನು?

ಇ. ಲೇಖಕರಿಗೆ ಕಾಪಿ ಮಾಡುವ ಕಲೆ ಕೊನೆಗೂ ಬರಲೇ ಇಲ್ಲ ಏಕೆ?

ಈ. ಗುರು–ಹಿರಿಯರ ಬಗ್ಗೆ ಲೇಖಕರಿಗಿದ್ದ ಗೌರವವೇನು?

ಉ. ತಂದೆ ಕೊಂಡುಕೊಂಡು ಬಂದಿದ್ದ ಪುಸ್ತಕದ ಹೆಸರೇನು? ಅದರಲ್ಲಿ ಅಡಗಿದ್ದ ಆದರ್ಶವೇನು?

**3. ಈ ಕೆಳಗಿನ ಗಾದೆಗಳ ಅರ್ಥವನ್ನು 3–4 ಸಾಲುಗಳಲ್ಲಿ ನಿಮ್ಮ ವಾಕ್ಯಗಳಲ್ಲಿ ವಿವರಿಸಿ ಬರೆಯಿರಿ** **5**

ಅ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ

ಆ. ಉಪದೇಶಕ್ಕಿಂತ ಉದಾಹರಣೆ ಲೇಸು

ಇ. ಮನಸ್ಸಿದ್ದರೆ ಮಾರ್ಗವಿದೆ

ಈ. ತೊಟ್ಟಿಲ ತೂಗುವ ಕೈ ದೇಶವನ್ನು ಆಳಬಲ್ಲದು

ಉ. ಹಲ್ಲು ಕಿತ್ತ ಹಾವು

**4. ಈ ಕೆಳಕಂಡ ತತ್ಸಮಗಳಿಗೆ ತದ್ಭವಗಳನ್ನು ಬರೆಯಿರಿ** **5**

ಆ. ದೃಷ್ಟಿ–

ಇ. ಕಾರ್ಯ–

ಈ. ಪ್ರಸಾದ–

ಉ. ಗ್ರಹ–

ಊ. ಶರ್ಕರ–

**5. ಈ ಕೆಳಕಂಡ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ** **5**

ಆ. ಸ್ತುತಿ x

ಇ. ಊರ್ಜಿತ x

ಈ. ಆಡಂಬರ x

ಉ. ಸನ್ಮಾರ್ಗ x

ಊ. ಪ್ರಧಾನ x

**6. ಈ ಕೆಳಗಿನ ವಾಕ್ಯ ರಚನೆಯ ದೋಷಗಳನ್ನು ಸರಿಪಡಿಸಿ ಶುದ್ಧ ವಾಕ್ಯದಲ್ಲಿ ಬರೆಯಿರಿ** **5**

ಆ. ಅನಾಹುತಗಳಿಂದ ಎಚ್ಚರ ಹಾಗಾಗದಿರುವಂತೆ ವಹಿಸಿದಾಗ ಪ್ರಕೃತಿ ವಿಕೋಪಗಳಿಗೆ ಕಾರಣವಾಗುತ್ತಿದ್ದು, ಮನುಷ್ಯನೆ ಅದರಿಂದಾಗುವ ಅರಿತು ಪಾರಾಗಬಹುದು ಮಾತ್ರ ಈ ಅನಾಹುತವನ್ನು.

ಇ. ಹೆಚ್ಚಾಗುವುದನ್ನು ಸಮಯದಲ್ಲಿಯೇ ಜನಸಂಖ್ಯೆಯು ತೀವ್ರಗತಿಯಲ್ಲಿ ಭೂಭಾಗದಲ್ಲಿ ನಿರ್ದಿಷ್ಟ 'ಜನಸಂಖ್ಯಾಸ್ಫೋಟ'ವೆನ್ನಲಾಗುತ್ತದೆ ಒಂದು ಸ್ವಲ್ಪ.

ಈ. ಚಮತ್ಕಾರವನ್ನು ಹೆಚ್ಚಿಸಲು ಮತ್ತು ಸೌಂದರ್ಯವನ್ನು ಕಾವ್ಯದ ರಸಪುಷ್ಟಿಯನ್ನುಂಟು ಮಾಡಲು ಪ್ರಯೋಗಿಸುತ್ತಾರೆ ವಿವಿಧ ಶಬ್ದಾರ್ಥಗಳ ಕವಿಗಳು.

ಉ. ಆಟೋಟಗಳಂದಾಗುವ ಅತಿಥಿಗಳು ನಡೆದ ವಿತರಿಸಿ, ಪೂರ್ವಭಾವಿಯಾಗಿ ಲಾಭಗಳ ಆಟೋಟ ಕುರಿತು ಸ್ಪರ್ದೆಗಳಲ್ಲಿ ಮನಮುಟ್ಟುವಂತೆ ವಿಜೇತರಾದವರಿಗೆ ತಿಳಿಸಿ ಹೇಳಿದರು ಬಹುಮಾನಗಳನ್ನು.

ಊ. ಕುರಿತು ಭಾಷಣ ನೀಡಿ, ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಸಾಹಿತ್ಯ ವಿಜೇತರಾಗಿದ್ದ ವಿದ್ಯಾರ್ಥಿ ಸ್ಪರ್ಧೆಗಳಲ್ಲಿ ಜೀವನದ ಬಹುಮಾನಗಳನ್ನು ಮಾಡಿದರು ಮುಖ್ಯ ಸಧ್ಭಳಕೆಯ ಅತಿಥಿಗಳು ಮತ್ತು ಮಹತ್ವ ವಿಚಾರಪೂರ್ಣ.

**7. "ತ್ಯಾಜ್ಯ ವಿಲೇವಾರಿ" ವಿಷಯದ ಕುರಿತು ನೂರು ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ, 5**

**8. ಈ ಕೆಳಗಿನ ವಿಷಯವನ್ನು ಕನ್ನಡಕ್ಕೆ ಭಾಷಾಂತರಿಸಿ. 5**

We will be wasting our available precious time and will be grumbling that we have no time to reserve for our hobbies, works, studies, music etc. we will always be worrying that there is no time between house and office work. But there are 24 hours for everyone, proper usage of the precious time depends how 24 hours of a day is properly planned and utilized.

# ಭಾಗ–ಬಿ

**9.** ಕವಿಪ್ರನಿನಿ/ವಿಸಕಂಗಳು ಮತ್ತು ಪಿಸಿಕೆಎಲ್‌ನ ನಿಯೋಜಿಸಲ್ಪಟ್ಟಿರುವ ಅಧಿಕಾರಿಗಳು ಕಡ್ಡಾಯವಾಗಿ ಇಲಾಖಾ ಪರೀಕ್ಷಾ ಕಾರ್ಯಗಳಿಗೆ ಹಾಜರಾಗುವಂತೆ ಸೂಚಿಸಿ ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ), ಕವಿಪ್ರನಿನಿ ರವರು ಹೊರಡಿಸುವ ಸುತ್ತೋಲೆಯನ್ನು ಸಿದ್ಧಪಡಿಸಿ. **10**

**10.** ಆರ್ಥಿಕ ಸಲೆಹೆಗಾರರು(ಆಂ.ಪ) ಅವರಿಂದ ವಿ.ಸ.ಕಂ. ಯ ವ್ಯವಸ್ಥಾಪಕ ನಿರ್ದೇಶಕರಿಗೆ ಸದರಿ ಕಂಪನಿಯ ವಿಭಾಗದ ಲೆಕ್ಕಾಧಿಕಾರಿ (ಆಂ.ಪ) ರವರು ವಿಭಾಗೀಯ ಉಗ್ರಾಣದ ತಪಾಸಣೆಯ ಸಮಯದಲ್ಲಿ ಗಮನಿಸಿದ ನ್ಯೂನ್ಯತೆಗಳನ್ನು ವಿವರಿಸಿ ಒಂದು ವರದಿಯನ್ನು ತಯಾರಿಸಿ **10**

**11.** ನಿವೃತ್ತರಾಗುವ ಅಧಿಕಾರಿಗಳ/ನೌಕರರ ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳನ್ನು ಶೀಘ್ರಗತಿಯಲ್ಲಿ ಇತ್ಯರ್ಥಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಕುರಿತಂತೆ ಪ್ರಧಾನ ವ್ಯವಸ್ಥಾಪಕರು (ಆ & ಮಾ.ಸಂ.ಅ), ಹುವಿಸಕಂ ರವರು ತಮ್ಮ ಕಂಪನಿ ವ್ಯಾಪ್ತಿಯ ವಿಭಾಗ, ವೃತ್ತ ಮತ್ತು ವಲಯ ಕಛೇರಿಗಳ ಮುಖ್ಯಸ್ಥರಿಗೆ ತಿಳಿಸಲು ಸೂಕ್ತ ಪತ್ರದ ಕರಡನ್ನು ಸಿದ್ಧಪಡಿಸಿ. **10**

**12.** ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರಾಜರಾಜೇಶ್ವರಿ ನಗರ ಉಪವಿಭಾಗ ರವರು ಓರ್ವ ಎಲ್‌ಟಿ–5 ಜಕಾತಿಯ ಗ್ರಾಹಕರಿಗೆ ಹೆಚ್ಚುವರಿ ಭದ್ರತಾ ಠೇವಣಿಯನ್ನು ಪಾವತಿಸುವ ಸಲುವಾಗಿ ಬರೆದ ಕರಡು ನೋಟಿಸನ್ನು ತಯಾರಿಸಿ. **10**

**13.** ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ), ಕವಿಪ್ರನಿನಿ ರವರಿಂದ ನಿಗಮದ ಎಲ್ಲಾ ಮುಖ್ಯ ಇಂಜಿನಿಯರ್‌ಗಳು, ಲೆಕ್ಕ ನಿಯಂತ್ರಣಾಧಿಕಾರಿಗಳು, ಅಧೀಕ್ಷಕ ಇಂಜಿನಿಯರ್‌ಗಳು, ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕಾರ್ಯನಿರ್ವಾಹಕ ಇಂಜಿನಿಯರ್‌ಗಳು ಮತ್ತು ಲೆಕ್ಕಾಧಿಕಾರಿಗಳು ರವರಿಗೆ ನಿಧಿಯ ವರ್ಗಾವಣೆಗಾಗಿ ನಿಧಿ ಕೋರಿಕೆ ಪ್ರಸ್ತಾವನೆಗಳನ್ನು ಸಲ್ಲಿಸುವ ಕಾರ್ಯವಿಧಾನವನ್ನು ಪಟ್ಟಿಮಾಡಿ ಅವುಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ತಿಳಿಸಲು ಪತ್ರದ ಕರಡು ಪ್ರತಿಯನ್ನು ತಯಾರಿಸಿ. **10**

* * * * * *